
# ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಿಂದ




ಕಾಳಿಕಾದೇವಿಯನ್ನೇ ಪ್ರಕೃತಿ ಎಂದೂ ಕರೆಯುವರು. ಪುರುಷನ(ಶಿವ) ಮೇಲೆ ನಿಂತಿರುವ ಸ್ತ್ರೀವಿಗ್ರಹದಂತೆ ಇದನ್ನು ಚಿತ್ರಿಸುವರು. ಮಾಯೆಯ ತೆರೆ ಸರಿಯುವವರೆಗೂ ನಾವು ಏನನ್ನೂ ತಿಳಿಯಲಾರೆವು ಎಂಬುದೇ ಇದರ ಅರ್ಥ. ಬ್ರಹ್ಮವು ಲಿಂಗಾತೀತ, ಅವನನ್ನು ಯಾರೂ ಅರಿತಿಲ್ಲ ಮತ್ತು ಅರಿಯಲೂ ಆರರು. ಅವನು ಮಾಯೆಯಿಂದ ಆವೃತನಾಗಿ ಜಗಜ್ಜನನಿಯಾಗಿ ವ್ಯಕ್ತನಾಗಿ ವಿಶ್ವವನ್ನು ಸೃಷ್ಟಿಸುವನು. ಕೆಳಗೆ ಇರುವ ಶಿವ ಮಾಯೆಯಿಂದ ಆವೃತನಾಗಿ ಶವದಂತೆ ಆಗುವನು. ಜ್ಞಾನಿಯು ಬಲಾತ್ಕಾರವಾಗಿ ದೇವರನ್ನು ಅನಾವರಣ ಮಾಡುತ್ತೇನೆ ಎಂದು ಹೋರಾಡುವನು. ಭಕ್ತರಾದರೋ "ಜಗನ್ಮಾತೆಗೆ ಪ್ರಾರ್ಥಿಸಿ ಅದನ್ನು ಅನಾವರಣ ಮಾಡಿಸುತ್ತೇವೆ. ಯಾವ ಬಾಗಿಲಿಗೆ ಅವಳೊಬ್ಬಳ ಹತ್ತಿರ ಮಾತ್ರ ಕೀಲಿಕೈಗಳು ಇರುವುವೋ ಅವಳನ್ನು ಬಾಗಿಲುಗಳನ್ನು ತೆಗೆಯಬೇಕೆಂದು ಬೇಡಿಕೊಳ್ಳುತ್ತೇವೆ" ಎನ್ನುವರು.

ಜಗನ್ಮಾತೆಗೆ ಪ್ರತಿದಿನವೂ ಮಾಡುತ್ತಿದ್ದ ಪೂಜೆಯಿಂದ ಶ್ರೀರಾಮಕೃಷ್ಣರಲ್ಲಿ ಭಕ್ತಿ ಉತ್ಕಟವಾಗಿ ಉದ್ದೀಪನವಾಯಿತು. ಇದರಿಂದ ಪ್ರತಿದಿನದ ಪೂಜಾದಿಗಳನ್ನು ಅವರಿಗೆ ಮಾಡಲಾಗಲಿಲ್ಲ. ಅನಂತರ ಅವರು ಪೂಜಾಕೆಲಸಗಳನ್ನು ಬಿಟ್ಟು ದೇವಸ್ಥಾನದ ಹೊರಗಿದ್ದ ಒಂದು ಕಾಡಿಗೆ ಹೋಗಿ ಅಲ್ಲಿ ತಪಸ್ಸಿನಲ್ಲಿ ತನ್ಮಯರಾಗತೊಡಗಿದರು. ಜಗನ್ಮಾತೆಗಾಗಿ ಅತ್ತರು, ಪ್ರಾರ್ಥಿಸಿದರು. ಜಗನ್ಮಾತೆಯ ವಿನಾ ಮತ್ತಾವ ಆಲೋಚನೆಯನ್ನೂ ಮಾಡುತ್ತಿರಲಿಲ್ಲ. ದೇಹದ ರಕ್ಷಣೆಯ ವಿಷಯವನ್ನೇ ಮರೆತರು. ಇವರಿಗೆ ತಾಯಿಯೇ (ಕಾಳಿ) ಸರ್ವಸ್ವವಾಗಿದ್ದಳು.

ಜಗನ್ಮಾತೆಯ ಹೆಸರಿನೊಂದಿಗೆ ಸರ್ವಶಕ್ತವಾದ ದೈವೀಶಕ್ತಿಯ ಭಾವನೆ ಬರುವುದು. ಮಗು ತನ್ನ ತಾಯಿ, ಸರ್ವಶಕ್ತಳು; ಅವಳು ಏನನ್ನು ಬೇಕಾದರೂ ಮಾಡಬಲ್ಲಳು ಎಂದು ನಂಬುವುದು. ಜಗನ್ಮಾತೆಯೇ ನಮ್ಮಲ್ಲಿ ಸುಪ್ತವಾಗಿರುವ ಕುಂಡಲಿನಿ. ಅವಳನ್ನು ಪೂಜಿಸದೆ ನಮ್ಮನ್ನು ನಾವು ಅರಿಯಲಾರೆವು. ಜಗನ್ಮಾತೆ ಕರುಣಾಮಯಳು, ಸರ್ವಶಕ್ತಳು, ಸರ್ವವ್ಯಾಪಿನಿ. ಪ್ರಪಂಚದಲ್ಲಿರುವ ಶಕ್ತಿಯ ಮೊತ್ತವೇ ಇವಳು. ಪ್ರಪಂಚದಲ್ಲಿರುವ ಪ್ರತಿಯೊಂದು ಶಕ್ತಿಯ ಅಭಿವ್ಯಕ್ತಿಯೂ ಕಾಳಿಯೇ. ಇವಳೇ ಚೇತನ, ಬುದ್ಧಿ, ಪ್ರೇಮ. ಇವಳೇ ವಿಶ್ವ. ಆದರೂ ಅದರಿಂದ ಬೇರೆ ಇರುವಳು. ಇವಳು ಒಂದು ವ್ಯಕ್ತಿ. (ಶ್ರೀರಾಮಕೃಷ್ಣರು ಇವಳನ್ನು ಕಂಡಂತೆ, ಅರಿತಂತೆ) ನಾವೂ ಇವಳನ್ನು ನೋಡಬಹುದು, ಅರಿಯಬಹುದು. ಜಗನ್ಮಾತೆಯ ಆದರ್ಶದಲ್ಲಿ ಪ್ರತಿಷ್ಠಿತರಾದ ಮೇಲೆ ನಾವು ಏನನ್ನು ಬೇಕಾದರೂ ಮಾಡಬಹುದು. ಇವಳು ನಮ್ಮ ಪ್ರಾರ್ಥನೆಯನ್ನು ತತ್‌ಕ್ಷಣವೆ ಈಡೇರಿಸುವಳು.

ಯಾವ ಕ್ಷಣದಲ್ಲಿ ಬೇಕಾದರೂ, ಯಾವ ಆಕಾರದ ಮೂಲಕವಾಗಿ ಬೇಕಾದರೂ ಇವಳು ನಮಗೆ ಗೋಚರಿಸಬಲ್ಲಳು. ಕಾಳಿ ನಾಮರೂಪಗಳನ್ನು ಬೇಕಾದರೆ ಇಟ್ಟುಕೊಂಡಿರಬಲ್ಲಳು ಅಥವಾ ಆಕಾರವಲ್ಲದೇ ಕೇವಲ ನಾಮವನ್ನು ಮಾತ್ರ ಇಟ್ಟುಕೊಂಡಿರಬಲ್ಲಳು. ನಾವು ಇವಳನ್ನು ಈ ಭಾವಗಳ ಮೂಲಕ ಉಪಾಸನೆ ಮಾಡಿದಾಗ, ನಾವೂ ಕೂಡ ನಾಮರೂಪಗಳಿಗೆ ಅತೀತವಾದ ಪರಿಶುದ್ಧ ಸ್ಥಿತಿಗೆ ಹೋಗಬಹುದು.

ಶಾಂತಸಮುದ್ರವೇ ನಿರಪೇಕ್ಷ ಸತ್ಯ. ಅಲೆಗಳಿಂದ ತುಂಬಿರುವ ಸಮುದ್ರವೇ ಕಾಳಿ. ಅವಳೇ ಕಾಲ, ದೇಶ, ನಿಮಿತ್ತ. ದೇವರೇ ಕಾಳಿ. ಅವಳಿಗೆ ವ್ಯಕ್ತ ಮತ್ತು ಅವ್ಯಕ್ತವೆಂಬ ಎರಡು ಸ್ವಭಾವಗಳಿವೆ. ವ್ಯಕ್ತದ ದೃಷ್ಟಿಯಿಂದ ಅವಳೇ ಈಶ್ವರ, ಪ್ರಕೃತಿ ಮತ್ತು ಜೀವ. ಅವ್ಯಕ್ತದ ದೃಷ್ಟಿಯಿಂದ ಅವಳು ನಮಗೆ ಗೊತ್ತಿಲ್ಲ, ಗೊತ್ತಾಗುವಂತೆಯೂ ಇಲ್ಲ.

ನಾನು ಕಾಳಿಯನ್ನು ಹೇಗೆ ದ್ವೇಷಿಸುತ್ತಿದ್ದೆ! ಅವಳ ರೀತಿಯನ್ನೆಲ್ಲಾ ದ್ವೇಷಿಸುತ್ತಿದ್ದೆ. ನಾನು ಅವಳನ್ನು ಸ್ವೀಕರಿಸಲಿಲ್ಲ. ಅದಕ್ಕೆ ಆರು ವರುಷಗಳವರೆಗೆ ಹೋರಾಡಬೇಕಾಯಿತು. ಆದರೆ ಕೊನೆಗೂ ನಾನು ಅವಳನ್ನು ಸ್ವೀಕರಿಸಬೇಕಾಯಿತು. ಶ್ರೀರಾಮಕೃಷ್ಣ ಪರಮಹಂಸರು ನನ್ನನ್ನು ಅವಳಿಗೆ ಅರ್ಪಿಸಿದರು. ನಾನು ಮಾಡುತ್ತಿರುವುದನ್ನೆಲ್ಲಾ ಪ್ರೇರೇಪಿಸುತ್ತಿರುವವಳು ಅವಳೇ ಎಂದು ಈಗ ನಾನು ನಂಬುತ್ತೇನೆ. ಅವಳು ನನ್ನನ್ನು ಇಚ್ಛೆ ಬಂದಂತೆ ತಿರುಗಿಸುತ್ತಾಳೆ. ಆದರೂ ನಾನು ಅಷ್ಟು ದೀರ್ಘಕಾಲ ಹೋರಾಡಿದೆ. ನಾನು ಅವರನ್ನು (ಪರಮಹಂಸರು) ಪ್ರೀತಿಸುತ್ತಿದ್ದೆ. ಆದಕಾರಣವೇ ನಾನು ಬದ್ಧನಾಗಿದ್ದೆ. ಯಾವಾಗಲೂ ಯಾರಾದರೂ ದೇವದೇವಿಯರನ್ನು ಅವರು ನೋಡುತ್ತಿದ್ದರು. ನಾನು ಅದನ್ನು ದ್ವೇಷಿಸುತ್ತಿದ್ದೆ. ಕೊನೆಗೆ ನಾನೂ ಅವಳನ್ನು (ಕಾಳಿ) ಸ್ವೀಕರಿಸಬೇಕಾಯಿತು. ಭವಿಷ್ಯದಲ್ಲಿ ಜನರು ಶ್ರೀರಾಮಕೃಷ್ಣ ಪರಮಹಂಸರನ್ನು ಕಾಳಿಕಾಮಾತೆಯ ಅವತಾರವೆನ್ನುತ್ತಾರೆ ಎನ್ನುವಿರಾ? ಹೌದು, ಅದರಲ್ಲಿ ಸಂಶಯವೇ ಇಲ್ಲ. ಅವಳು ಕೇವಲ ತನ್ನ ಕೆಲಸಕ್ಕಾಗಿ ಶ್ರೀರಾಮಕೃಷ್ಣರೆಂಬ ದೇಹವನ್ನು ಸೃಷ್ಟಿಸಿದಳೆಂದು ನಾನು ಭಾವಿಸುತ್ತೇನೆ.

★